ಓ.ಎಸ್. ನಂ.213/2018 ರಲ್ಲಿ
ಪಿ.ಡಬ್ಲ್ಯೂ-2(ಡಿ.ಚಂದ್ರಶೇಖರ್)

ದಿನಾಂಕ 28.01.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಹೆಚ್.ಜೆ., ವಕೀಲರಿಂದಃ-

ನಮ್ಮ ಕಛೇರಿಯಲ್ಲಿ ಇಬ್ಬರು ಕೆಲಸ ಮಾಡುತ್ತೇವೆ. ಅವರಂದರೆ ಆಶಾ ಮತ್ತು ನಾನು. ನಮ್ಮ ಕಛೇರಿಯ ಹೆಸರು ಮಹದೇಶ್ವರ ಪ್ರಸನ್ನ. ಕೆ.ಪಿ.ಪ್ರದೀಪ್ ಕುಮಾರ್ ಮತ್ತು ಕೆ.ಪಿ.ಶಿವಕುಮಾರ್ ನನ್ನ ಬಾಮೈಕಳು ಎಂದರೆ ಸರಿ. ಅವರು ಸಹ ಜಿಲ್ಲಾ ಪತ್ರ ಬರಹಗಾರರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ವಾದಿ ಕರೆದುಕೊಂಡು ಬಂದರು. ಈ ದಿನ ನ್ಯಾಯಾಲಯಕ್ಕೆ ವಾದಿಯ ಎಸ್.ಪಿ.ಎ ಹೋಲ್ಡರ್ ಪ್ರಕಾಶ್‌ರವರು ಕರೆದುಕೊಂಡು ಬಂದರು ಎಂದರೆ ಸರಿ. ಪಿ.ಡಬ್ಲ್ಯೂ-1 ಪ್ರಕಾಶ್‌ರವರು ನನಗೆ 20 ವರ್ಷಗಳಿಂದ ಪರಿಚಯ. ಪಿ.ಡಬ್ಲ್ಯೂ-1 ರವರಿಗೆ ಸಂಬಂಧಪಟ್ಟಂತೆ ನೀವು ಎಷ್ಟು ದಾಖಲೆಗಳನ್ನು ಮಾಡಿರಬಹುದು ಎಂದರೆ ಸಾಕ್ಷಿಯು ಎರಡು, ಮೂರು ದಾಖಲೆಗಳನ್ನು ಮಾಡಿರಬಹುದು ಎಂದು ನುಡಿಯುತ್ತಾರೆ. ನಾನು, ಪಿ.ಡಬ್ಲ್ಯೂ-1 ಪ್ರಕಾಶ್‌ರವರ ಹೆಸರಿನಲ್ಲಿ ಮಾಡಿರುವ ಎಲ್ಲಾ ದಾಖಲೆಗಳು ಸ್ವಾಧೀನ ರಹಿತ ಕರಾರು ಪತ್ರಗಳು ಎಂದರೆ ಸರಿ. ಸದರಿ ಪಿ.ಡಬ್ಲ್ಯೂ-1 ಪ್ರಕಾಶ್‌ರವರು ಆ ಕರಾರು ಪತ್ರಗಳನ್ನು ಅವರ ತಂದೆ ವೀರಣ್ಣರವರ ಹೆಸರಿನಲ್ಲೇ ಮಾಡಿಸಿದ್ದಾರೆ ಎಂದರೆ ಸರಿ. ನನಗೆ ಈಗ ದಾಖಲೆಯನ್ನು ಪಿ.ಡಬ್ಲ್ಯೂ-1 ಪ್ರಕಾಶ್‌ರವರೇ ಅವರ ತಂದೆಯ ಹೆಸರಿನಲ್ಲಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಪಿ.ಡಬ್ಲ್ಯೂ-1 ಪ್ರಕಾಶ್‌ರವರ ತಂದೆಯ ಹೆಸರಿನಲ್ಲಿ ಆಗಿದ್ದ ಕರಾರು ಪತ್ರಗಳನ್ನು ಪ್ರಕಾಶ್‌ರವರೇ ಬಂದು ರದ್ದಿಯಾತಿ ಪತ್ರ ಮಾಡಿಸಿದ್ದಾರೆ ಎಂದರೆ ಸರಿ.

ನಾನು ಈ ದಿನ ಪ್ರಕಾಶ್‌ರವರು ಹೇಳಿದ ಹಾಗೆ ಬಂದು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಮಾಹಿತಿ ಕೊಟ್ಟದ್ದು ಪ್ರಕಾಶ್‌ರವರು. ವೀರಣ್ಣ ಮತ್ತು ರುದ್ರೇಶ್‌ರವರ ನಡುವೆ ನಿಮ್ಮ ಮುಂದೆ ಯಾವುದೇ ವ್ಯವಹಾರ ಖುದ್ದಾಗಿ ನಡೆದಿಲ್ಲ ಎಂದರೆ ಸಾಕ್ಷಿಯು ನಡೆದಿಲ್ಲ, ಚೆಕ್ ಕೊಟ್ಟರು, ಹಣ ಕೊಟ್ಟರು ಎಂದು ನುಡಿಯುತ್ತಾರೆ. ಚೆಕ್ ನಂಬರ್ ನನಗೆ ಗೊತ್ತಿಲ್ಲ. ಹಣ 4 ಲಕ್ಷ ರೂಗಳನ್ನು ಕೊಟ್ಟರು. ನಿಪಿ-2 ದಾಖಲೆಯನ್ನು ಪ್ರಕಾಶ್‌ರವರೇ ತಯಾರು ಮಾಡಿ ತಂದಿದ್ದು ಅದಕ್ಕೆ ನಾನು ಸೀಲು, ಸಹಿ ಮಾತ್ರ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ನ್ನು ನೀವು ತಯಾರು ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಕಛೇರಿಯಲ್ಲೇ ಮಾಡಿಸಿದ್ದು ಎಂದು ನುಡಿಯುತ್ತಾರೆ. ನಾನು ದಾಖಲೆಗಳನ್ನು ಡ್ರಾಫ್ಟ್ ಮಾಡುವ ಬಗ್ಗೆ ರಿಜಿಸ್ಟರ್ ನಿರ್ವಹಿಸಿಲ್ಲ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು, ಪ್ರಕಾಶ್‌ರವರು ಹೇಳಿದ ಹಾಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಎದುರು ಸಾಕ್ಷಿದಾರರು ನಿಪಿ-2ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2ಕ್ಕೆ ಪ್ರತಿವಾದಿಗಳು ನನ್ನ ಎದುರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಕಾಶ್‌ರವರ ಮಾತು ಕೇಳಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ನ್ನು ಪ್ರಕಾಶ್‌ರವರು ಸಾಲದ ಭದ್ರತೆಗಾಗಿ ತಯಾರು ಮಾಡಿಕೊಂಡು ನನ್ನ ಬಳಿ ರಿಜಿಸ್ಟರ್ ಮಾಡಿಸಲು ಮಾತ್ರ ಬಂದಿದ್ದರು ಎಂದರೆ ಸರಿಯಲ್ಲ.

<u>ಓ.ಎಸ್. ನಂ.213/2018 ರಲ್ಲಿ</u>
ಪಿ.ಡಬ್ಲ್ಯೂ-2(ಡಿ.ಚಂದ್ರಶೇಖರ್)

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.